ಕರಮಚಂದ ನೆಲವನ್ನು ಕೂಲಂಕಷವಾಗಿ ಪರಿಶೀಲಿಸುತ್ತಾ ಅತ್ತಿತ್ತ ಚಲಿಸಿದ. ಟಾರ್ಚ್ ಬೆಳಕು ವೃತ್ತಾಕಾರವಾಗಿ ಭೂಮಿಯ ಮೇಲೆ ಸರಿದಾಡಿತು. ಮನೆಯ ಹಿಂಬಾಗಿಲಿನಿಂದ ಹಿಂದಿನ ಗೇಟಿನವರೆಗೆ ಮುಳ್ಳುಕಂಟಿಗಳ ನಡುವೆ ಕಾಲು ಓಡಿಸಿದವನು ಒಮ್ಮೆಗೇ ಹಿಂದಿರುಗಿ ಅಂದ: "ಬಿದ್ದಪ್ಪ, ನಾವೀಗ ಹೋಗೋಣ. ನಮ್ಗೆ ಇಲ್ಲಿ ಇನ್ನೇನೂ ಹುಡುಕೋದಿಲ್ಲ."

ನಾವು ಆತನ ಜೊತೆ ಹೆಜ್ಜೆ ಹಾಕಿದೆವು.

★★★

ಮರುದಿನ ಬೆಳಿಗ್ಗೆ ಏಳು ಗಂಟೆಗೇ ವೆಲಂಟೈನ್ ಡಿಸೋಜ ಹಾಜರಾದಾಗ ನನಗೆ ಸೋಜಿಗ.

"ಡಿಸೋಜನ್ನ ಬರೋಕೆ ನಾನೇ ಹೇಳಿದ್ದು. ಸುಭಾಷಿಣಿ ಬಂದ ತಕ್ಷಣ ಹೊರಡೋಣ. ಈ ರಚನ್ ಪ್ರಕರಣ ಮುಗಿಯುವ ಹಾಗೆ ಕಾಣ್ತದೆ... ಹಾಂ... ಅಗೋ, ಸುಭಾಷಿಣಿ ಬರ್ತಾ ಇದಾರೆ... ಬಿದ್ದಪ್ಪ, ಬೇಗ!"

ಹತ್ತು ನಿಮಿಷಗಳಲ್ಲಿ ನಾವು ಅದೇ ಪಾಳು ಕಟ್ಟಡದ ಸನಿಹ ಬಂದೆವು. ಸುಭಾಷಿಣಿಯ ಮೋರೆಯಲ್ಲಿ ಆತಂಕ ಮಡುಗಟ್ಟಿತ್ತು. ಕರಮಚಂದ ಜೇಬಿನಿಂದ ಚಿಕ್ಕ ಸುತ್ತಿಗೆ ತೆಗೆದು, ಬೀಗದ ಮೇಲೆ ಬಲವಾಗಿ ಹೊಡೆದ. ಜೀರ್ಣವಾಗಿದ್ದ ಬೀಗ ದೊಪ್ಪನೆ ಕೆಳಗೆ ಬಿತ್ತು.
ಒಳಗಡಿಯಿಡುತ್ತಿದ್ದಂತೆ ಕಮಟು ವಾಸನೆ ಬಡಿಯಿತು. ಕರಮಚಂದ ಬೆನ್ನು ಬಗ್ಗಿಸಿ, ನೆಲವನ್ನು ವೀಕ್ಷಿಸಿದ. ನಾವು ಆತನ ಹಿಂದೆ ನಿಂತೆವು. ದೂಳು ತುಂಬಿದ ನೆಲದಲ್ಲಿ ಹಳೆಯ ಮೇಜಿನ ಸನಿಹ ಅಡ್ಡಾದಿಡ್ಡಿ ವಿವಿಧ ಗಾತ್ರದ ಹೆಜ್ಜೆಗಳು ಮೂಡಿದ್ದವು! ಕಿರು ನಕ್ಕ, ಕರಮಚಂದ ಮುಂದೆ ಸರಿದು, ಮೇಜನ್ನು ಮೆಲ್ಲಗೆ ಸರಿಸಿದ. ನೆಲದಲ್ಲಿ ನಾಲ್ಕು ಅಡಿ ಉದ್ದ ಅಗಲದ ಮರದ ಬಾಗಿಲು ಕಂಡಿತು! ಕರಮಚಂದ ಅದರ ಹಿಡಿಕೆಯನ್ನೆತ್ತಿ ತೆರೆದ. ಕೆಳಗೆ ಮೆಟ್ಟಿಲುಗಳು ಗೋಚರಿಸಿದವು! ಕೈಯಲ್ಲಿ ರಿವಾಲ್ವರ್ ಹಿಡಿದು, ಕರಮಚಂದ ನೆಲಮಾಳಿಗೆ ಪ್ರವೇಶಿಸಿದ. ಸಪ್ಪಳ ಮಾಡದೆ ನಾವು ಹಿಂಬಾಲಿಸಿದೆವು.

ಪುಟ್ಟದಾದ ಕೊಠಡಿಯ ಮಧ್ಯದಲ್ಲಿ ಕುರ್ಚಿಯಲ್ಲೊಬ್ಬ ಕುಳಿತಿದ್ದ. ತುಸು ದೂರದಲ್ಲಿ ಮಂಚದಲ್ಲಿ ಹಾಸಿಗೆ, ಪಕ್ಕದಲ್ಲಿ ಮೇಜು ಇದ್ದವು. ಕಡಿಮೆ ಪ್ರಕಾಶದ ದೀಪವೊಂದು ಉರಿಯುತ್ತಿತ್ತು. ಆ ವ್ಯಕ್ತಿ ಮಿಸುಕಾಡುತ್ತಿರಲಿಲ್ಲ. ತಲೆ ತಗ್ಗಿಸಿ ಕುಳಿತಿದ್ದ. ಅವನನ್ನು ಕಾಣುತ್ತಲೇ ಸುಭಾಷಿಣಿ ಅರಚಿದಳು,

"ರಚನ್!" ಕರಮಚಂದ ಆತನ ಮೊಗವನ್ನು ಮೇಲಕ್ಕೆ ಎತ್ತುತ್ತಲೇ ಆಕೆ ತಡವರಿಸುತ್ತಾ ಮಾತು ಸೇರಿಸಿದಳು,

"ಊಹುಂ... ಇದು ರಚನ್ ಅಲ್ಲ... ನೀವು ಇಲ್ಲಿಗೇಕೆ ಕರೆತಂದಿರಿ?"

"ನಿಮ್ಗೆ ಒಮ್ಮೆ ಗೊಂದಲವಾಯ್ತು ಅಲ್ವೆ? ಈ ಮನುಷ್ಯ ಪಕ್ಕನೆ ನೋಡುವಾಗ ರಚನ್ ಹಾಗೆ ಕಾಣ್ತಾರೆ. ಆದ್ರೆ ರಚನ್ ಅಲ್ಲ!! ಅಪ್ಪಿಗಿಂತ ಕನಿಷ್ಠ ಹತ್ತು ವರ್ಷಗಳಷ್ಟು ಹಿರಿಯವರು! ನಿನ್ನೆ ರಾತ್ರಿ ನೋಡಿದ್ದು ನೀವು ಇವರನ್ನೇ!! ಇವರ ಹೆಸರು ಮಾಳೇಟಿರ ಸುಬ್ಬಯ್ಯ. ಇವರಿಗೆ ಅಮಲು ಪದಾರ್ಥದ ಇಂಜೆಕ್ಷನ್ ನೀಡಿದ್ದರಿಂದ, ಹೀಗೆ ಮಂಪರಿನಲ್ಲಿ ಇದ್ದಾರೆ. ಇವರನ್ನ ಕಾಯೋಕೆ ಯಾರಾದ್ರೂ ಇರಬಹುದೆಂದು ಎಣಿಸಿ, ರಿವಾಲ್ವರ್ ಹಿಡ್ದೆ. ಆದ್ರೆ ಯಾರೂ ಇಲ್ಲ. ಡಿಸೋಜ, ಕೂಡ್ಲೆ ನಿಮ್ಮ ಮಂದಿಗೆ ಹೇಳಿ ಆಂಬುಲೆನ್ಸ್ ತರಿಸಿ, ಇವರನ್ನ ಆಸ್ಪತ್ರೆಗೆ ಸೇರಿಸೋ ಏರ್ಪಾಡು ಮಾಡು. ನಾವೀಗ ಕಾಮಾಕ್ಷಿ ದೇವಾಲಯದತ್ತ ಹೋಗೋಣ."

"ಅಲ್ಲ ಈತ ಇಲ್ಲಿರೋದು ನಿನ್ಗೆ ಹೇಗೆ ಗೊತ್ತಾಯ್ತು?"